ಆದ್ದರಿಂದ ತಟ್ಟೆಯನ್ನು ಮಕ್ಕಳು ತಂದು ತೆಗೆದುಕೊಂಡು ಹೋದರೆ, ಸರಿ ಇರುತ್ತದೆ ಎನ್ನುವ ಒಂದು ದೃಷ್ಟಿಯಿಂದ ಅದನ್ನು ಮಾಡಿದ್ದೇವೆ. Planning Department ನವರನ್ನು ನಾವು ಇನ್ನೊಂದು ಸಲ ಕೇಳುತ್ತೇವೆ. ಅವರು ಅನುಮತಿಯನ್ನು ಕೊಟ್ಟರೆ ಕೊಡುತ್ತೇವೆ. ಅನುದಾನಿತ ಶಾಲೆಗಳಿಗೆ ಮಾನ್ಯ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಕೊಡಬಹುದು. ಮೊದಲು ಇದಕ್ಕೆ ನಿಯಮಗಳು ಇರಲಿಲ್ಲ. ಈಗ ನಿಯಮಗಳಲ್ಲಿ ಕೊಡುವುದಕ್ಕೆ ಯಾವುದೇ ಅಭ್ಯಂತರವಿಲ್ಲ, ಕೊಡಬಹುದು. ಸಾಧ್ಯವಾದಂಥ ರೀತಿಯಲ್ಲಿ ಸರ್ಕಾರ ಕಳೆದ ಎರಡು ವರ್ಷಗಳಿಂದ ಬೆಂಚು ಹಾಗೂ ಇನ್ನಿತರ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದೆ. ಅನುದಾನಿತ ಶಾಲೆಗಳಿಗೂ ಸಹಿತ ಈ ವ್ಯವಸ್ಥೆಯನ್ನು ಮಾಡಿರುತ್ತೇವೆ. ಸರ್ಕಾರಿ ಶಾಲೆಗಳಲ್ಲಿ ಏನು ನಿಯಮಗಳು ಇವೆ, ಆ ಎಲ್ಲಾ ನಿಯಮಗಳನ್ನು ಅನುದಾನಿತ ಶಾಲೆಗಳಿಗೆ ವಿಸ್ತರಣೆಯನ್ನು ಮಾಡಿದ್ದೇವೆ.

ಕಬಿನಿ ಎರಡನೇ ಹಂತದ ಯೋಜನೆ ಜಾರಿಗೊಳಿಸುವುದು.

113 (1185) **ಶ್ರೀ ಧೃವನಾರಾಯಣ ಆರ್. (ಸಂತೇಮರಳ್ಳಿ) :–** ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ ಎರಡನೇ ಹಂತದ ಯೋಜನೆ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ, ಈ ಯೋಜನೆ ಜಾರಿಗೆ ತರಲು ವಿಳಂಬವಾಗಿರುವುದಕ್ಕೆ ಕಾರಣಗಳೇನು?

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಇದೆ.

ಆ) 1986–87 ರಲ್ಲಿ ಮಂಜೂರಾದ ರೂ. 390 ಕೋಟಿಗಳ ಪರಿಷ್ಕೃತ ಕಬಿನಿ ಯೋಜನೆಯಲ್ಲಿ ಕಬಿನಿ ಜಲಾಶಯದಿಂದ ಸಾಗರ ದೊಡ್ಡಕೆರೆ ಮತ್ತು ಅಪ್ಪರ್ ನುಗು ಅಣೆಕಟ್ಟಿಗೆ ನೀರೆತ್ತಿ ಅಲ್ಲಿಂದ ನಾಲೆಗಳ ಮುಖಾಂತರ ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು ಯೋಜಿಸಿ ರೂ. 250 ಕೋಟಿ ಅವಕಾಶವನ್ನು ಮಾಡಲಾಗಿತ್ತು. ಆದರೆ, ಇದರಿಂದಾಗಿ 5188 ಎಕರೆ ರಕ್ಷಿತ ಅರಣ್ಯ ಪ್ರದೇಶ ಮುಳುಗಡೆಯಾಗುವುದರಿಂದ ಸರ್ವೆ ಮಾಡಲು ಸಹಾ ಅರಣ್ಯ ಇಲಾಖೆಯಿಂದ ಅನುಮತಿ ದೊರಕಿರಲಿಲ್ಲ. ಆದ್ದರಿಂದ ಈ ಯೋಜನೆಯ ಸರ್ವೆಕಾರ್ಯವನ್ನು ಕೈಬಿಡಲಾಯಿತು.

ನಂತರ, 1990 ರಲ್ಲಿ ಸಾಗರ ದೊಡ್ಡಕೆರೆ ಅಣೆಕಟ್ಟೆಯ ಪ್ರಸ್ತಾಪಿತ ಸ್ಥಳವನ್ನು ಬದಲಿಸಿ ಮಾಡಲಾದ ಸರ್ವೆಯಂತೆ 630 ಎಕರೆ ಅರಣ್ಯ ಪ್ರದೇಶ, ಕಬಿನಿ ಅಣೆಕಟ್ಟೆ ನಿರ್ಮಾಣದಿಂದಾಗಿ ಪುನರ್ವಸತಿ ಗ್ರಾಮಗಳಾದ ಹೆಗ್ಗನೂರು ಮತ್ತು ತೆಲಗುಮಾಸ ಹಳ್ಳಿ ಪ್ರದೇಶ ಹಾಗೂ ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನದಿಂದಾಗಿ ಪುನರ್ವಸತಿಗೊಂಡ ಕಾಟವಾಳು, ಮಾಟಗೆರೆ, ಬಡಗ ಮತ್ತು ದೇವಲಾಪುರ ಗ್ರಾಮಗಳು ಮುಳುಗಡೆಯಾಗುತ್ತಿದ್ದುದರಿಂದ ಈ ಪ್ರದೇಶಗಳ ಗ್ರಾಮಸ್ಥರ ಪ್ರತಿರೋಧದಿಂದಾಗಿ ಸರ್ವೆ ಕಾರ್ಯವನ್ನು ಸ್ಥಗಿತಗೊಳಸಲಾಗಿತ್ತು. ಪ್ರಸ್ತುತ, ಕಬಿನಿ ಜಲಾಶಯದ ಹಿನ್ನೀರಿನಿಂದ ನೇರವಾಗಿ ಜಲಾಶಯದ ಹಿನ್ನೀರಿನಿಂದ ನೀರನ್ನು ಎತ್ತಿ ಏತ ನೀರಾವರಿ ನಾಲೆಗಳಾದ ಬಿದರಹಳ್ಳಿ ಮತ್ತು ಅಂತರಸಂತೆ ನಾಲೆಗಳಿಗೆ 9.128 ಟಿ.ಎಂ.ಸಿ ನೀರೆತ್ತಿ ಒಟ್ಟು 1,23,347 ಎಕರೆ ಪ್ರದೇಶಕ್ಕೆ ನೀರೊದಗಿಸಲು ಯೋಜಿಸಲಾಗಿದೆ. ಈ ಯೋಜನೆಗಳೂ ಸೇರಿದಂತೆ ಕಬಿನಿ ಕೊಳ್ಳದ ಎಲ್ಲಾ ಪ್ರತ್ಯೇಕ ಏತ ನೀರಾವರಿ ಯೋಜನೆಗಳ ನೀರಿನ ಬಳಕೆ ಸೇರಿದಂತೆ 65 ಟಿ.ಎಂ.ಸಿ ನೀರನ್ನು ಉಪಯೋಗಿಸುವ ಸಮಗ್ರ ಕಬಿನಿ ಯೋಜನೆಯ ರೂ. 1233.00 ಕೋಟಿಗಳ ಅಂದಾಜು ಪರಿಶೀಲನೆಯಲ್ಲಿದೆ.

ನೀರಿನ ಹಂಚಿಕೆ ಕುರಿತು ಉನ್ನತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಆರ್. ಧ್ರುವನಾರಾಯಣ್ :- ಮಾನ್ಯ ಅಧ್ಯಕ್ಷರೆ, ಕಬಿನಿ ಎರಡನೇ ಹಂತದ ಬಗ್ಗೆ ಮಾನ್ಯ ಸಚಿವರು ಈಗಾಗಲೇ ತಿಳಿಸಿದ್ದಾರೆ, ಮತ್ತು ಮಾಡಿಯೇ ಮಾಡುತ್ತೇವೆಂದು ಘೋಷಣೆಯನ್ನು ಹಾಕಿರುತ್ತಾರೆ. ಆದರೆ ಪ್ರಗತಿ ಮಾತ್ರ ಶೂನ್ಯ. ನಾನು ಕೇಳುವುದು ಇಷ್ಟೆ, ಕಾವೇರಿ ಟ್ರಿಬ್ಯೂನಲ್ ಬಂದು ನಾಲ್ಕು ತಿಂಗಳು ಕಳೆದಿದೆ. ಕಳೆದ ಅಧಿವೇಶನದಲ್ಲಿ ಇದನ್ನು ಮಾಡಿಯೇ ಮಾಡುತ್ತೇವೆಂದು ಅವರು ಹೇಳಿದ್ದಾರೆ. ಚಾಮರಾಜನಗರ ಜಿಲ್ಲೆಗೆ ಯಾವುದೇ ಒಂದು ಅಣೆಕಟ್ಟಿನಿಂದ ನೀರಾವರಿ ಇಲ್ಲ. ಸುಮಾರು 53 ಸಾವಿರ ಎಕರೆ ಜಮೀನಿಗೆ ನೀರಾವರಿ ಆಗತಕ್ಕಂಥ ಯೋಜನೆ ಇದು. ಇದಕ್ಕೆ ಬೇಕಾಗಿರತಕ್ಕಂಥದ್ದು 9 TMC ನೀರು ಮಾತ್ರ. ಈಗಾಗಲೇ ಕಾವೇರಿ ಟ್ರಿಬ್ಯೂನಲ್ ಅವಾರ್ಡ್ ಪ್ರಕಾರ ನಮಗೆ ಏನು 270 TMC ನೀರನ್ನು ಕೊಟ್ಟಿದ್ದಾರೆ, ನಮಗೆ ಬೇಕಾಗಿರುವುದು 9 TMC ನೀರು ಮಾತ್ರ. ದಯಮಾಡಿ ಈ ನೀರಿನ ನಿರ್ವಹಣೆ efficient water management ಏನಿದೆ, ಅದನ್ನು ಮಾಡಿದರೆ ಸಾಕು. ಕಳೆದ ಸಾಲಿನಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು

ನೀರಾವರಿ ಸಚಿವರಾಗಿದ್ದಾಗ ಇದನ್ನು ಸಚಿವ ಸಂಪುಟದಲ್ಲಿ ಇಟ್ಟು ಬೇಕಾಗಿರುವ 1200 ಕೋಟಿ ರೂ.ಗಳಿಗೆ ಅನುಮತಿಯನ್ನು ಕೂಡ ದೊರಕಿಸಿ ಕೊಟ್ಟಿದ್ದರು. ದಯಮಾಡಿ ಮಾನ್ಯ ಸಚಿವರು ಬರೀ ಘೋಷಣೆಯನ್ನು ಕೊಡತಕ್ಕಂಥದ್ದು ಅಲ್ಲ, ಈ ಸದನದಲ್ಲಿ ತಾವು ಹೇಳಬೇಕು. ಯಾವಾಗ ಟೆಂಡರ್ ಕರೆಯುತ್ತೀರಿ, ಈ ವರ್ಷ ಇದಕ್ಕೆ ಎಷ್ಟು ಹಣವನ್ನು allocate ಮಾಡುತ್ತೀರಿ ಎನ್ನುವುದರ ಬಗ್ಗೆ ಹೇಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರ ಕಳಕಳಿಗೆ ಸರ್ಕಾರದಿಂದ ಕೂಡ ನಾವು ಅವರಿಗೆ ಬೆಂಬಲವನ್ನು ವ್ಯಕ್ತಪಡಿಸುತ್ತೇವೆ. ಕಬಿನಿ ಎರಡನೇ ಹಂತದ ಈ ಯೋಜನೆ ಖಂಡಿತವಾಗಿ ನಾವು ಮಾಡುತ್ತೇವೆ. ಇದಕ್ಕೆ ಯಾವುದೇ ಹಿಂದೆ ಮುಂದೆ ಇಲ್ಲ, ದಯವಿಟ್ಟು ಘೋಷಣೆ ಎಂದು ಅಂದುಕೊಳ್ಳಬೇಡಿ. ಹೀಗಾಗಿ ಇವತ್ತು ನೀವು ಹೇಳಿದ್ದು ಎಲ್ಲಾ ಅಂಶಗಳು ಸರಿ ಇದೆ. 9 TMC ನೀರು ಬೇಕು, ಎಷ್ಟು ಎಕರೆ ನೀರಾವರಿಯಾಗುತ್ತದೆ ಇದೆಲ್ಲದರ ಬಗ್ಗೆ ಆಗುತ್ತದೆ. ಈ ಟ್ರಿಬ್ಯೂನಲ್ ಬಂದು 4 ತಿಂಗಳು ಆಗಿದೆ. 270 TMC ಎಂದು ಅವರು ಮಾಡಿದ್ದಾರೆ, ಅದನ್ನು ನಾವು ಸಂಪೂರ್ಣವಾಗಿ ಒಪ್ಪಿಲ್ಲ. ಅದನ್ನು ಒಪ್ಪಿಕೊಳ್ಳಬೇಕೆಂದು ಏನೂ ಇಲ್ಲ. ಅದಕ್ಕಾಗಿ ನಾವು ಕೂಡ Supreme Court ಗೆ ಹೋಗಿರುವುದು. ಕಬಿನಿ ಎರಡನೇ ಹಂತದ ಯೋಜನೆ ಬಗ್ಗೆ ನಿನ್ನೆ ಕೂಡ ನಾನು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಸ್ಪಷ್ಟ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಇಡೀ ಸರ್ಕಾರ ಈ ಕಾಮಗಾರಿ ಆಗಬೇಕೆನ್ನುವ ಆಸಕ್ತಿಯಲ್ಲಿ ನಾವಿದ್ದೇವೆ. ಈಗ ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿ ಖಂಡಿತವಾಗಿ ಇದನ್ನು ಆದಷ್ಟು ಬೇಗ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ಈಗ ಮೂರು ತಿಂಗಳಿಗೆ ಭರವಸೆಯನ್ನು ಕೊಟ್ಟರು. ಇವರ ಭರವಸೆ ಒಂದು ರೀತಿಯ ಗಾಣಗಿತ್ತಿ ಅಯ್ಯೋ ಎಂದಂತೆ ಇದೆ, ಆದರೆ ಮಗುವಿನ ತಲೆಯಲ್ಲಿ ಎಣ್ಣೆ ಇಲ್ಲ. ಬರೀ ಅಯ್ಯೋ ಅಯ್ಯೋ ಎಂದರೆ ಆಗುವುದಿಲ್ಲ. ನನಗೆ ಅರ್ಥವಾಗಲಿಲ್ಲ, ನಾನು ನಿಮ್ಮ ಕೆಲಸದ ಬಗ್ಗೆ ಮೆಚ್ಚಿದ್ದೇನೆ. ಹಿಂದೆ ನೀವು ಏನು ಹೇಳಿದಿರಿ, ಯಾವುದೇ ತೀರ್ಪು ಬರಲಿ, ಏನೇ ಬರಲಿ, ನಾವು ಕಾಮಗಾರಿಯನ್ನು ಶುರು ಮಾಡುತ್ತೇವೆ. ದಯಮಾಡಿ ಯಾವಾಗ ಮಾಡುತ್ತೀರಿ ಎನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಇದು ಶಂಕುಸ್ಥಾಪನೆ ಆಯಿತು.

ಅಧ್ಯಕ್ಷರು :– ಇಷ್ಟು ದಿವಸದೊಳಗೆ ಮಾಡುತ್ತೇವೆಂದು ಹೇಳಿ, ಮಾಡುವುದಕ್ಕಾಗದಿದ್ದರೆ ಅವರ ಮೇಲೆ ಪ್ರಿವಿಲೇಜ್ ಬರುತ್ತದೆ. ಆದ್ದರಿಂದ ಅಷ್ಟು ಸುಲಭವಾಗಿ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಆರ್. ಧ್ರುವನಾರಾಯಣ್ :– ಕಳೆದ ಅಧಿವೇಶನದಲ್ಲಿ ಕೂಡ ಇದೆ ಉತ್ತರವನ್ನು ಹೇಳಿದ್ದರು.

ಅಧ್ಯಕ್ಷರು :– ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ಈಗ ಅವರು ಹೇಳಿರುವುದು 5 ನೇ ಸಲ ಸರ್. ತಾವು ಒಂದು ಭರವಸೆಯನ್ನು ಕೊಡಿ, ತಮ್ಮ ಭರವಸೆ ಹುಸಿಯಾಗಬಾರದು.

(12 : 00 ಘಂಟೆ)

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ವಾಟಾಳ್ ನಾಗರಾಜ್‌ರವರು ನಿನ್ನೆ ದಿನ ಈ ಬಗ್ಗೆ ಒತ್ತು ಕೊಡುತ್ತಾರೆಂದು ತಿಳಿದುಕೊಂಡಿದ್ದೆ. ನಿನ್ನೆ ದಿನ ಅವರು ಸುಮ್ಮನೆ ಕುಳಿತುಕೊಂಡು ಠುಸ್ ಆಗಿ ಬಿಟ್ಟರು. ಇವತ್ತು ಮಾನ್ಯ ಸದಸ್ಯರಾದ ಶ್ರೀ ಧ್ರುವನಾರಾಯಣ್ ಇವತ್ತು ಸುಮ್ಮನೆ ಇದ್ದರೆ ಇವರು ಎದ್ದು ಮಾತನಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :– ನನ್ನನ್ನು ಸುಸ್ತು ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ನೀವು ಈ ಹುಸಿಯನ್ನು ಹೇಳುತ್ತಿದ್ದಿರಲ್ಲಾ. ತಾವು ಯಾವಾಗಲೂ ನನ್ನ ಪಕ್ಕದಲ್ಲಿಯೇ ಇರುತ್ತಿದ್ದಿರಿ. ನಾನು ಸುಸ್ತು ಆಗುವುದಕ್ಕೆ ಸಾಧ್ಯವೇನು? ಈ ಜನುಮದಲ್ಲಿ ಸಾಧ್ಯವೇ?

ಅಧ್ಯಕ್ಷರು :– ಆಯಿತು. ಅಮರೇಗೌಡ ಬಯ್ಯಾಪುರರವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಅಧ್ಯಕ್ಷರೆ, ಇದಕ್ಕೆ ಸರಿಯಾದ ಉತ್ತರ ಬಂದಿಲ್ಲ.

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರಲ್ಲಾ?

ಶ್ರೀ ಆರ್. ಧ್ರುವನಾರಾಯಣ್ :– ಕಳೆದ ಅಧಿವೇಶನದಲ್ಲಿಯೂ ಕೂಡ ಇದೆ ರೀತಿಯ ಉತ್ತರವನ್ನು ಮಾನ್ಯ ಸಚಿವರು ಕೊಟ್ಟರು. ಇದೇ ಉತ್ತರವನ್ನು ಕೊಟ್ಟರೆ ಹೇಗೆ? ಮಾನ್ಯ ಸಚಿವರು ಈ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು.

ತಾವು ನಮ್ಮ ಜಿಲ್ಲೆಗೆ ಹತ್ತಿರದವರಾಗಿದ್ದೀರಿ. ದಯಮಾಡಿ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ :– ಮಾನ್ಯ ವಾಟಾಳ್ ನಾಗರಾಜ್‌ರವರು ತಿಳಿಸಿದ ಹಾಗೆ, ಮಾನ್ಯ ಧ್ರುವನಾರಾಯಣ್‌ರವರು ತಿಳಿಸಿದ ಹಾಗೆ ಈ ಒಂದು ಯೋಜನೆ ನಿಮಗೆ ಗೊತ್ತಿರುವ ಹಾಗೆ ಕಬಿನಿ ಎರಡನೇ ಹಂತದ್ದು. ನಾವು ಟ್ರಿಬ್ಯೂನಲ್ ಬಗ್ಗೆಯೂ ಕೂಡ ನಾವು ಸಂಪೂರ್ಣವಾಗಿ ತಿರಸ್ಕಾರ ಮಾಡುವುದಕ್ಕೂ ಕೂಡ ಬರುವುದಿಲ್ಲ. ಈಗಾಗಲೇ ನಾವು ಸುಪ್ರೀಂಕೋರ್ಟ್‌ಗೆ ಹೋಗಿದ್ದೇವೆ. ಅಲ್ಲೂ ಕೂಡ ಏನಾಗುತ್ತಿದೆ ಎಂಬುದನ್ನು ಸಹ ನಾವು ನೋಡುತ್ತಿದ್ದೇವೆ. ಈಗಾಗಲೇ ನಮ್ಮ ಉನ್ನತಮಟ್ಟದ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿದ್ದೇವೆ. ಈ ಸರ್ಕಾರ ಖಂಡಿತವಾಗಿ ಇದರ ಬಗ್ಗೆ ಬದ್ಧವಾಗಿದ್ದು, ನಾವು ಮಾಡುತ್ತೇವೆ. ಇವತ್ತೇ ಘೋಷಣೆ ಮಾಡಿ ಎಂದು ಹೇಳಿದರೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಇದನ್ನು ತಾವು ಮಾಡಬೇಕು. ತಾವು ಏತಕ್ಕಾಗಿ ಹೆದರುತ್ತೀರಿ.

ಅಧ್ಯಕ್ಷರು :– ಅಮರೇಗೌಡ ಬಯ್ಯಾಪುರರವರೆ ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು :– ಆಯಿತು, ತಾವುಗಳು ದಯಮಾಡಿ ಕುಳಿತುಕೊಳ್ಳಿ. ನಾನು ಮುಂದಿನ ಪ್ರಶ್ನೆಯನ್ನು ಕೇಳುವ ಬಗ್ಗೆ ಕರೆದಿದ್ದೇನೆ. ಗ್ರಾಮೀಣ ನಗರ ನೀರು ಸರಬರಾಜು ಸಚಿವರು ತಾವು ದಯಮಾಡಿ ಉತ್ತರವನ್ನು ಹೇಳಿ.

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಸಚಿವರಿಂದ ಉತ್ತರ ಬಂದಿಲ್ಲ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ :– ಕುಡಿಯುವ ನೀರು ಯೋಜನೆಯಡಿಯಲ್ಲಿ ಕಾಮಗಾರಿಗಳ ಸಂಖ್ಯೆ ಕೇವಲ 2,....

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು :– ತಾವು ಕುಳಿತುಕೊಳ್ಳಿ, ನಾನು ಮುಂದಿನ ಪ್ರಶ್ನೆಗೆ ಹೋಗಿದ್ದೇನೆ. ಆಯಿತು. ಅವರು ಉತ್ತರವನ್ನು ಕೊಡುತ್ತಾರೆ ತಾವು ಕುಳಿತುಕೊಳ್ಳಿ, ನಾನು ಕುಳಿತುಕೊಳ್ಳಿ ಎಂದು ಹೇಳಿದರೂ ಕೂಡ ತಾವು ಎದ್ದುನಿಂತು ಮಾತನಾಡಿದರೆ ಹೇಗೆ?

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ :– ಈ ಎರಡು ಕಾಮಗಾರಿಗಳನ್ನು 5 ವರ್ಷದಿಂದ ಟೆಂಡರ್‌ನ್ನು ಕರೆದು ಕುಡಿಯುವ ನೀರನ್ನು ಕೊಡುವುದಕ್ಕಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ.....

ಶ್ರೀ ಆರ್. ಧ್ರುವನಾರಾಯಣ್ :– ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು :– ದಯಮಾಡಿ ತಾವುಗಳು ಕುಳಿತುಕೊಳ್ಳಿ, ಸುಮ್ಮನೆ ನನ್ನನ್ನು ರೇಗಿಸಬೇಡಿ. ಪ್ರಶ್ನೋತ್ತರ ಪ್ರಾರಂಭವಾಗಿ ಎಷ್ಟು ಗಂಟೆಯಾಯಿತು. ಇನ್ನು ಎಷ್ಟು ಪ್ರಶ್ನೆಗಳು ಇವೆ. ಕುಳಿತುಕೊಳ್ಳಿ. ಸುಮ್ಮನೆ ನೀವು ಒಬ್ಬರೇ ಅಲ್ಲ ಸದಸ್ಯರು, ಇಲ್ಲಿ ಎಲ್ಲರೂ ಸದಸ್ಯರಾಗಿದ್ದಾರೆ. ಒಂದು ಸಾರಿ ಹೇಳಿದೆ ತಾವು ಅರ್ಥಮಾಡಿಕೊಳ್ಳಬೇಕು. ಮಾನ್ಯ ಬಯ್ಯಾಪುರರವರೆ ತಾವು ಪ್ರಶ್ನೆಯನ್ನು ಕೇಳಿ, ಅವರದ್ದು ಇದ್ದೇ ಇದೆ. ಈ ತರಹ ತಾವುಗಳು ಮಾಡಿದರೆ ನಾನು ನಿಯಮಾವಳಿಗಳ ಪ್ರಕಾರ ಹೊರಗಡೆ ಕಳುಹಿಸಿಬಿಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಕನ್ನಡಕ ಹಾಕಿರುವವರೆಲ್ಲರನ್ನು ಹಾಗೇ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು :– ದಯಮಾಡಿ ತಾವು ಹೇಳಿ. ಆಯಿತು ಅದು ಮುಗಿದ ಕಥೆ. ದಯಮಾಡಿ ತಾವುಗಳು ಕುಳಿತುಕೊಳ್ಳಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಆರ್. ಧ್ರುವನಾರಾಯಣ್ ಹಾಗೂ ಶ್ರೀ ವಾಟಾಳ್ ನಾಗರಾಜ್‌ರವರುಗಳು ಸದನದ ಬಾವಿಗೆ ಬಂದರು)

(ಮಾನ್ಯ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್ ಹಾಗೂ ಶ್ರೀ ಆರ್. ಧ್ರುವನಾರಾಯಣ್‌ರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಅಧ್ಯಕ್ಷರು :– ಈ ತರಹ ತಾವುಗಳು ಮಾಡುವುದಾದರೆ, ನಾನು ನಿಯಮಗಳ ಪ್ರಕಾರ ಹೊರಗೆ ಕಳುಹಿಸಬೇಕಾಗುತ್ತದೆ. ತಾವುಗಳು ಏನು ಬೇಕಾದರೂ ಮಾಡಿಕೊಳ್ಳಿ. ನೀವುಗಳು ವೆಲ್‌ಗೆ ಆದರೂ ಬನ್ನಿ, ಏನಾದರೂ ಮಾಡಿಕೊಳ್ಳಿ. ಈ ರೀತಿಯಾಗಿ ಮಾಡುವುದನ್ನು ಸಹಿಸುವುದಕ್ಕಾಗುವುದಿಲ್ಲ. Question Hour ನ್ನು ನೀವು ಹೇಳಿದಹಾಗೆ ಎಲ್ಲ ಉತ್ತರವನ್ನು ಕೊಡಿಸುವುದಕ್ಕಾಗುವುದಿಲ್ಲ. ಮಾನ್ಯ ಬಯ್ಯಾಪುರರವರೆ ತಾವು ಕೇಳಿ.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ :- ಇಲ್ಲಿಯವರೆಗೆ ಅದನ್ನು ಮುಗಿಸಿರುವುದಿಲ್ಲ. ನಾನು ಯಾವಾಗ ಮುಗಿಸುತ್ತೀರೆಂದು ಕೇಳಿದರೆ, ಇನ್ನೂ ಅವಧಿಬೇಕೆಂದು ಕೇಳಿದ್ದಾರೆ. ಲಿಂಗಸೂರು ತಾಲ್ಲೂಕಿನ ಯರಡೋಣ ಗ್ರಾಮಕ್ಕೆ ಕೇವಲ ವಿದ್ಯುತ್‌ನ್ನು.....

ಅಧ್ಯಕ್ಷರು :- ನೀವೇನಾದರೂ ಜೋರಾಗಿ ಮಾತನಾಡಿದರೆ ನಿಯಮಾವಳಿಗಳ ಪ್ರಕಾರ ಹೊರಗೆ ಕಳುಹಿಸಿಬಿಡುತ್ತೇನೆ. ಈಗ ನೋಡಿ ಎಷ್ಟು ಗಂಟೆಯಾಗಿದೆ. ಇನ್ನು ಎಷ್ಟು ಪ್ರಶ್ನೆಗಳು ಇವೆ? ನೀವು ಇದನ್ನು ಅರ್ಥಮಾಡಿಕೊಳ್ಳಬೇಕು. ಏನು ಮಾಡುವುದಕ್ಕಾಗುತ್ತದೆ? ನಿಮಗೆ ಬೇಕಾದಂತಹ ಉತ್ತರವನ್ನು ಕೊಡಿ ಎಂದು ನಾನು ಸಚಿವರಿಗೆ ಹೇಳುವುದಕ್ಕಾಗುವುದಿಲ್ಲ. ದಯಮಾಡಿ ತಾವು ಅರ್ಥಮಾಡಿಕೊಳ್ಳಬೇಕು. ಈಗ ಏನು ಮಾಡಿದ್ದಾರೆಂದರೆ, ನೀವುಗಳು 5 ನಿಮಿಷ ಪ್ರಶ್ನೆಯನ್ನು ಕೇಳುತ್ತೀರಿ, ಕೆಲವು ಸಚಿವರು ಬಹಳ ದೀರ್ಘವಾಗಿ ಉತ್ತರವನ್ನು ಕೊಡುತ್ತಾರೆ. ಅದು 5 ನಿಮಿಷಗಳಾಗುತ್ತದೆ. ನಾವು 15 ಪ್ರಶ್ನೆಗಳನ್ನು ಮುಗಿಸಬೇಕಾಗಿದೆ. ದಯಮಾಡಿ ತಾವುಗಳು ಕೇಳಬೇಕು. ಅದಕ್ಕೆ ಇನ್ಯಾವುದೇ ರೂಪದಲ್ಲಿ ಎತ್ತಿ ಅದನ್ನು ಕ್ಲಿಯರ್ ಮಾಡುತ್ತೇನೆ. ಆಯಿತು ತಾವುಗಳು ತಮ್ಮ ಸ್ಥಾನಗಳಿಗೆ ಹೋಗಿ. ಮಾನ್ಯ ಈಶ್ವರಪ್ಪನವರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಇದು ಬಹಳ ಮಹತ್ವವಾಗಿರುವಂತಹ ಪ್ರಶ್ನೆಯಾಗಿದೆ. ಕಾವೇರಿ ವಾಟರ್ ಡಿಸ್‌ಪ್ಯೂಟ್‌ನಲ್ಲಿ....

ಅಧ್ಯಕ್ಷರು :- ನಾನು ಖರ್ಗೆ ಸಾಹೇಬರಲ್ಲಿ ಒಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಒಂದು ನಿಮಿಷ ಸಾರ್.

ಅಧ್ಯಕ್ಷರು :- ನೋ, ನೋ, ಪ್ರಶ್ನೋತ್ತರದಲ್ಲಿ ಇದು ಎಲ್ಲಾ ಆಗುತ್ತದೆಯಾ ಸ್ವಾಮಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಿದ್ದರು. ತಾವು ಏಕೋ.....

ಅಧ್ಯಕ್ಷರು :- ಅವರು ಸ್ಪಷ್ಟವಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಏನು ಅಡೆತಡೆಗಳು ಇವೆ ಅದನ್ನು ನೋಡಿಕೊಂಡು ಮಾಡುತ್ತೇವೆ. ಮಾನ್ಯ ಸದಸ್ಯರು ಸ್ಪಷ್ಟವಾಗಿ ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. ಅಷ್ಟು ಪ್ರಶ್ನೆಯಾಗಿದೆ.

ಆದ್ದರಿಂದ ಇಂತಹ ಸಮಸ್ಯೆಗಳು ಬಂದಾಗ ಅವರು ಕರೆಯಬೇಕು, ಇವರು ಅವರ ಹತ್ತಿರ ಹೋಗಬೇಕು, ಪರಿಹಾರವನ್ನು ಕಂಡುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈಗಲೂ ಕೂಡ ಅದೇ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅದು ಇನ್ನೂ ಕೂಡ progress ಆಗಿಲ್ಲ. ಅದಕ್ಕಾಗಿ ದಯವಿಟ್ಟು ಅವರು ಯಾವಾಗ ಮಾಡುತ್ತೀರೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದನ್ನು ತಾವು ದಯಮಾಡಿ ಹೇಳಿಬಿಡಲಿ.

ಅಧ್ಯಕ್ಷರು :– ಮಾನ್ಯ ಈಶ್ವರಪ್ಪನವರೆ, ಇದಕ್ಕೆ ಸಂಬಂಧಪಟ್ಟ ಎಲ್ಲಾ ಶಾಸಕರನ್ನು ಕರೆದು ನಿಮ್ಮ ಅಧಿಕಾರಿಗಳನ್ನು ಕರೆದು ಆದಷ್ಟು ಬೇಗನೆ ತೀರ್ಮಾನ ಮಾಡಿ. ಆಯಿತು. ತಾವು ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಕೆ.ಎಸ್. ಈಶ್ವರಪ್ಪ :– ಕಬಿನಿ 2 ನೇ ಹಂತದ ಭಾಗಕ್ಕೆ ಸಂಬಂಧಪಟ್ಟಂತಹ ಯಾರು ಶಾಸಕರುಗಳು ಇದ್ದಾರೋ ಅವರೆಲ್ಲರನ್ನು ಕರೆದು ವಿಶೇಷ ಸಭೆಯನ್ನು ಖಂಡಿತವಾಗಿ ಮಾಡುತ್ತೇವೆ. ಅವರಿಗೆ ಸಮಾಧಾನವಾಗುವಂತಹ ಕಾರ್ಯಕ್ರಮವನ್ನು ಕೂಡ ನಾವು ಆರಂಭ ಮಾಡುತ್ತೇವೆ.

ಅಧ್ಯಕ್ಷರು :– ಆಯಿತು. ತಾವುಗಳು ತಮ್ಮ ಜಾಗಗಳಿಗೆ ನಡೆಯಿರಿ ಸ್ವಾಮಿ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್ ಹಾಗೂ ಶ್ರೀ ಆರ್. ಧ್ರುವನಾರಾಯಣ್‌ರವರುಗಳು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

<u>ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆ :–</u>

115 (617) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) :– ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯಲ್ಲಿ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯನ್ನು ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ) ಮಂಜೂರಾತಿ ಹಂತದಲ್ಲಿರುವ ಯೋಜನೆಗಳ ಸಂಖ್ಯೆ ಎಷ್ಟು;

ಇ) ಲಿಂಗಸಗೂರು ತಾಲ್ಲೂಕಿನ ಯರಡೋಣ ಗ್ರಾಮದ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯು ಮುಕ್ತಾಯಗೊಳ್ಳುವ ಅವಧಿ ಯಾವಾಗ;